**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 28-1-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಎಂಟನೇಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 3. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 4. | ಶ್ರೀ ಭೋಜನಗೌಡ | ಸದಸ್ಯರು |
| 5. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 6. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 7. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 8. | ಡಾ. ಚೆಲ್ಲಯ್ಯ | ಸದಸ್ಯರು |
| 9. | ಶ್ರೀ ಬಸವರಾಜಪಾಟೀಲ ಇಟಗಿ | ಸದಸ್ಯರು |
| 10. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 11. | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 12. | ಡಾ. ಪಿ. ಬಾಲಕೃಷ್ಣನ್ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಎಂಟನೇಯ ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ವಿಷಯವಾರು ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ವಿಶ್ವವಿದ್ಯಾಲಯದ ವಿವಿಧ ಕಾರ್ಯಚಟುವಟಿಕೆಗಳ ಸ್ಥಿತಿಗತಿ ಹಾಗೂ ಪ್ರಗತಿಯ ಕುರಿತಾಗಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಅವಗಾಹನೆಗೆ ತರಲು ಕಳೆದ ಸಭೆಯಲ್ಲಿ ತೀರ್ಮಾನಿಸಿದ ಪ್ರಕಾರ, ಹೊಸ ತಳಿಗಳ ಸುಧಾರಿತ ಬೆಳೆಗಳು / ಕೃವಿವಿ ರಾಯಚೂರು ಅಸ್ತಿತ್ವದಲ್ಲಿ ಬಂದ ನಂತರ ಬಿಡುಗಡೆ ಮಾಡಿರುವ ಪ್ರಮುಖ ಹೈಬ್ರೀಡ್ ತಳಿಗಳು ಮತ್ತು ಅವುಗಳ ಪ್ರಚಾರಪಡಿಸುವಿಕೆ, ಅಲ್ಲದೇ ವಿಶೇಷವಾಗಿ ಗುರುತಿಸಲ್ಪಟ್ಟ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಸಹ-ಸಂಶೋಧನಾ ನಿರ್ದೇಶಕರು, ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು ಅವರು ವಿವರಗಳನ್ನು ಪ್ರಸ್ತುತಪಡಿಸಿದರು. ಇದರಿಂದಾಗಿ ಸದಸ್ಯರುಗಳಲ್ಲಿ ಆಸಕ್ತಿಯುಂಟಾಗಿ ಇಂತಹ ಚಟುವಟಿಕೆಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಮಾಡಲು ಈ ಕೆಳಕಂಡಂತೆ ಸಲಹೆ ನೀಡಿದರು.

- ಅಭಿವೃದ್ಧಿಪಡಿಸಿದ ಹೊಸ ತಳಿಗಳನ್ನು ಹೆಚ್ಚು ಹೆಚ್ಚಾಗಿ ರೈತರ ಹೊಲಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ಬೀಜೋತ್ಪಾದನೆ ಹಾಗೂ ತೋಟಗಾರಿಕೆ ಬೆಳೆಗಳ ಸಂರಕ್ಷಿತ ಬೇಸಾಯದ ಕಾರ್ಯಚಟುವಟಿಕೆಗಳನ್ನು ಹೆಚ್ಚಿಸುವ ಅವಶ್ಯಕತೆಯಿರುತ್ತದೆ.
- ವಿಶ್ವವಿದ್ಯಾಲಯದ ವಿವಿಧ ಬೀಜಗಳನ್ನು ಹಾಗೂ ಹೈಬ್ರೀಡ್‌ಗಳನ್ನು ವಾಣಿಜ್ಯೀಕರಣಗೊಳಿಸುವ ಸಲುವಾಗಿ ಬೇರೆ ಬೇರೆ ಪ್ರಮುಖ ಸಂಸ್ಥೆಗಳೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಬೇಕೆಂಬ ಮಾನ್ಯ ಅಧ್ಯಕ್ಷರ ಸಲಹೆಗೆ ಮಾನ್ಯ ಸದಸ್ಯರುಗಳು ಒಪ್ಪಿಗೆ ಸೂಚಿಸಿದರು.
- ಅತ್ಯಂತ ಕಡಿಮೆ ಅವಧಿಯಲ್ಲಿ ಬಹಳಷ್ಟು ಸಸಿಗಳ ಮೊಳಕೆ ಬರುವಿಕೆಯನ್ನು ಉತ್ಪಾದಿಸುವ ಸಲುವಾಗಿ ಅನುಕೂಲವಾಗಲು ಬಯೋಟೆಕ್ನಾಲಜಿ ಲ್ಯಾಬ್‌ನಲ್ಲಿ ನವೀನ ಉಪಕರಣಗಳನ್ನು ಪಡೆಯಲು ಸಲಹೆ ನೀಡಿದರು.

| | |
|---|---|
| ಅನುಕ್ರಮ ಸಂ: 1 | ದಿನಾಂಕ 20-9-2011 ಹಾಗೂ 2-11-2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಆರನೇಯ ಹಾಗೂ ಏಳನೇಯ ಸಭೆಯ ನಡುವಳಿಗಳನ್ನು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಸ್ಥಿರೀಕರಿಸುವುದು |

ತದನಂತರ, ಅನುಕ್ರಮ ಸಂಖ್ಯೆ. 1 ನ್ನು ಕೈಗೆತ್ತಿಕೊಳ್ಳಲಾಯಿತು ಮತ್ತು ಇದರ ಕುರಿತು ಏನಾದರೂ ಸ್ಪಷ್ಟೀಕರಣದ ಅವಶ್ಯಕತೆಯಿದ್ದರೆ, ಅದನ್ನು ಚರ್ಚಿಸಬಹುದೆಂದು ಅಧ್ಯಕ್ಷರು ಮಾನ್ಯ ಸದಸ್ಯರುಗಳಿಗೆ ತಿಳಿಸಿದರು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ವಿಶ್ವವಿದ್ಯಾಲಯವು ಕೈಗೊಳ್ಳಲಾಗುತ್ತಿರುವ ರೈತರಿಗೆ ಒದಗಿಸುವ ಪರಿಕರಗಳ ಕುರಿತು ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರ ಪ್ರಶ್ನೆಗೆ ಅಧ್ಯಕ್ಷರು ಸ್ಪಷ್ಟೀಕರಣ ನೀಡುತ್ತಾ ಸಮಗ್ರ ಬೆಳೆ ನಿರ್ವಹಣೆ (ICM) ಕಾರ್ಯಕ್ರಮದಡಿ 2011-'12 ಸಾಲಿನಲ್ಲಿ ಸುಮಾರು 25,000 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಈ ಕಾರ್ಯಕ್ರಮದಡಿ ರೂ. 5,000/- ಮೌಲ್ಯದ ಕೃಷಿ ಪರಿಕರಗಳನ್ನು ಮಾತ್ರ ಬೆಳೆಗಳ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ವಿತರಿಸಲಾಯಿತು. ಮಳೆಯು ಬಾರದೇ ಇರುವುದರಿಂದ ಇನ್ನುಳಿದ ಪರಿಕರಗಳನ್ನು ವಿತರಿಸಲಾಗಲಿಲ್ಲ. ಇದುವರೆಗೆ ಸರಕಾರದಿಂದ ಅನುದಾನದ ಶೇಕಡ 50 ರಷ್ಟು ಮಾತ್ರ ಮಂಜೂರಾಗಿದೆಯೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು. ತೋಟಗಾರಿಕೆ ಮತ್ತು ಪಶುಸಂಗೋಪನೆಗೆ ಸಂಬಂಧಿಸಿದ ಇತರೇ ಪರಿಕರಗಳನ್ನು ಅದೇ ರೈತರುಗಳಿಗೆ ಮುಂಬರುವ ಹಂಗಾಮಿನಲ್ಲಿ ವಿತರಿಸಲಾಗುವುದು.

ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ದಿನಾಂಕ 3-3-2011 ರಂದು ಕ್ರೀಡಾ ಸಂಕೀರ್ಣಕ್ಕೆ ಬೇಟಿ ನೀಡಿದ ವಿಷಯದ ಬಗ್ಗೆ ಪ್ರಸ್ತಾಪಿಸಿ ಗಮನಸೆಳೆದಾಗ, ಈ ಕುರಿತು ಕಾರ್ಯನಿರ್ವಾಹಕ ಅಭಿಯಂತರರು ಕಾಂಟ್ರ್ಯಾಕ್ಟರ್‌ಗೆ ಅದನ್ನು ತಿಳಿಸಿರುತ್ತಾರೆ ಹಾಗೂ ಒಳ್ಳೇಯ ಗುಣಮಟ್ಟದ ಸಾಮಾಗ್ರಿಗಳನ್ನು ಮಾತ್ರ ಉಪಯೋಗಿಸಲಾಗಿರುತ್ತದೆಂದು ದೃಢಪಡಿಸಿಕೊಂಡಿರುತ್ತಾರೆ. ಮುಂದುವರೆದು, ಈ ಕುರಿತು ಅವಶ್ಯಕವಿದ್ದರೆ ತೃತೀಯ ಪಕ್ಷದಿಂದ ಪರಿಶೀಲನೆ ಮಾಡಿಸಬಹುದೆಂದು ಮಾನ್ಯ ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು. ಸಿವಿಲ್ ಕಾಮಗಾರಿಗಳನ್ನು ಚಾಚೂ ತಪ್ಪದೇ ಟೆಂಡರ್ ನಿಯಮಗಳನ್ನು ಪಾಲಿಸಿ ಎಸ್ಟಿಮೇಟ್ ಪ್ರಕಾರ ಕೈಗೊಳ್ಳಲು ಒಪ್ಪಿಸಲಾಗಿದೆ ಹಾಗೂ ಅವುಗಳ ಗುಣವತ್ತತೆ ಮತ್ತು ಒಳ್ಳೇಯ ಗುಣಮಟ್ಟದ ಸಾಮಾಗ್ರಿಗಳ ಉಪಯೋಗದ ಕುರಿತು ನಿಗಾ ಇಡಲಾಗಿದೆಯೆಂದು ಸ್ಪಷ್ಟಪಡಿಸಿದರು.

ಮಾನ್ಯ ಸದಸ್ಯರುಗಳು ವಿಶ್ವವಿದ್ಯಾಲಯದ ಎಲ್ಲಾ ಆವರಣಗಳಿಗೆ ಭೇಟಿ ನೀಡಿ ಸಿವಿಲ್ ಕಾಮಗಾರಿ, ಕ್ಷೇತ್ರಾಭಿವೃದ್ಧಿ ಕಾರ್ಯಗಳ ಪರಿವೀಕ್ಷಣೆ / ಪರಿಶೀಲನೆ ಮಾಡಲು ಹಾಗೂ ಅಭಿವೃದ್ಧಿಗಾಗಿ / ಸುಧಾರಣೆಗಾಗಿ ಸೂಕ್ತ ಸಲಹೆ ನೀಡಲು ಈಗಾಗಲೇ ತೀರ್ಮಾನಿಸಿದ ಪ್ರಕಾರ, ಪ್ರಥಮ ಹಂತದಲ್ಲಿ ಭೀಮರಾಯನಗುಡಿ, ಗುಲಬರ್ಗಾ, ರಡ್ಡೇವಾಡಗಿ ಮತ್ತು ಬೀದರ್ ನಲ್ಲಿಯ ವಿಶ್ವವಿದ್ಯಾಲಯದ ಸಂಸ್ಥೆಗಳಿಗೆ ಫೆಬ್ರವರಿ 15 ರಿಂದ 17, 2012 ರ ವರೆಗೆ ಶಿಕ್ಷಣ ನಿರ್ದೇಶಕರು, ಸಂಶೋಧನಾ ನಿರ್ದೇಶಕರು, ವಿಸ್ತರಣಾ ನಿರ್ದೇಶಕರು, ಸಹ-ಸಂಶೋಧನಾ ನಿರ್ದೇಶಕರು ಹಾಗೂ ಕಾರ್ಯನಿರ್ವಾಹಕ ಅಭಿಯಂತರರು ಅವರನ್ನೊಳಗೊಂಡು ಭೇಟಿ ನೀಡಲು ನಿಗದಿಪಡಿಸಲಾಯಿತು. ಅದರಂತೆ ಮುಂದಿನ ದಿನಗಳಲ್ಲಿ, ವಿಶ್ವವಿದ್ಯಾಲಯದ ಇತರೆ ಸಂಸ್ಥೆಗಳಿಗೆ ಭೇಟಿ ನೀಡಲು ನಿಗದಿಪಡಿಸಲಾಗುವುದು.

ವಿವಿಧ ಮಹಾವಿದ್ಯಾಲಯಗಳ / ಸಂಸ್ಥೆಗಳ / ಕೃಷಿ ವಿಜ್ಞಾನ ಕೇಂದ್ರಗಳ / ಯೋಜನೆಗಳ ಕಾರ್ಯಕ್ರಮಗಳಿಗೆ / ಸಮಾರಂಭಗಳಿಗೆ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವ ಕುರಿತಾದ ಪ್ರಶ್ನೆಗೆ, ಮಾನ್ಯ ಅಧ್ಯಕ್ಷರು ಉತ್ತರಿಸುತ್ತಾ ವಿಶ್ವವಿದ್ಯಾಲಯದ ಸಮಾರಂಭಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಲಾಗುವುದು ಹಾಗೂ ಅದೇ ಪ್ರಕಾರ ಕುಲಸಚಿವರು ಸೂಕ್ತ ಏರ್ಪಾಡು ಮಾಡುವರೆಂದು ಸ್ಪಷ್ಟಪಡಿಸಿದರು.

ಚರ್ಚೆಯ ಸಂದರ್ಭದಲ್ಲಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳವರಿಂದ ಫೆಬ್ರವರಿ 6 ರಿಂದ 7, 2012 ರ ವರೆಗೆ ಬೆಂಗಳೂರಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳವರಿಗೆ ಹಾಗೂ ಕೃಷಿ ಸಚಿವರಿಗೆ ಭೇಟಿ ಮಾಡಿ ವಿಶ್ವವಿದ್ಯಾಲಯದ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಇನ್ನೂ ಹೆಚ್ಚಿನ ಭೂಮಿ ಮತ್ತು ಅನುದಾನ ಒದಗಿಸಲು ಕೋರಿಕೊಳ್ಳಲು ಮತ್ತು ಜಿಲ್ಲಾಡಳಿತ ಭವನ ನಿರ್ಮಿಸಲು ವಿಶ್ವವಿದ್ಯಾಲಯದ ಯಾವುದೇ ಭೂಮಿಯನ್ನು ನೀಡಲು ಆಗುವುದಿಲ್ಲವೆಂದು ತಿಳಿಸಲು ನಿರ್ಧರಿಸಲಾಯಿತು

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಆರನೇಯ ಹಾಗೂ ಏಳನೇಯ (ತುರ್ತು) ಸಭೆಯ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಿ ಕೈಕೊಂಡ ಕ್ರಮಗಳಿಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| | |
|---|---|
| ಅನುಕ್ರಮ ಸಂ: 2 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಐ.ಎ.ಆರ್.ಐ., ನವದೆಹಲಿ, ಪಿ.ಎ.ಯು. ಲೂಧಿಯಾನ ಮತ್ತು ಕೇಂದ್ರೀಯ ಆಲೂಗಡ್ಡೆ ಸಂಶೋಧನಾ ಸಂಸ್ಥೆ ಶಿಮ್ಲಾಗೆ ಭೇಟಿ ನೀಡುವ ಕುರಿತು.** |

**ಠರಾವು:**

ದೀರ್ಘ ಚರ್ಚೆಯ ನಂತರ, ಶೇರ್–ಎ–ಕಾಶ್ಮೀರ್ ಕೃಷಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಜಮ್ಮು, ಪಂಜಾಬ ಕೃಷಿ ವಿಶ್ವವಿದ್ಯಾಲಯ, ಲೂಧಿಯಾನ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ನವದೆಹಲಿ ಇತ್ಯಾದಿಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು 26–2–2012 ರಿಂದ 5–3–2012 ವರೆಗೆ ಭೇಟಿ ನೀಡಲು ಹಾಗೂ ನವದೆಹಲಿಯಲ್ಲಿ ಏರ್ಪಡಿಸುವ ಕೃಷಿ ಮೇಳ, ತೋಟಗಾರಿಕೆ ಪುಷ್ಪ ಮೇಳ, ರಮ್ಯನೋಟ ಹಾಗೂ ಉದ್ಯಾನವನಗಳ ಮೇಳದಲ್ಲಿ ಭಾಗವಹಿಸಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು** |

**ಠರಾವು:**

ಸುದೀರ್ಘ ಚರ್ಚೆಯ ನಂತರ, ಕಾರ್ಯನಿರ್ವಾಹಕ ಅಭಿಯಂತರ (ಕೃಷಿ) ಹುದ್ದೆಯನ್ನು ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ಎಂದು ಪರಿವರ್ತಿಸಲು ಹಾಗೂ ಅರ್ಹ ಅಭ್ಯರ್ಥಿಯಾದ ಶ್ರೀ ರವಿ ಆರ್. ಮೇಸ್ತಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ (ಸಿವಿಲ್) ಮುಂಬಡ್ತಿ ಆದೇಶ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ

ಒಪ್ಪಿಗೆ ಸೂಚಿಸಿತು. ಆದಾಗ್ಯೂ, ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಈ ಕುರಿತು ತಮ್ಮ ಅಸಮಾಧಾನವನ್ನು ಸೂಚಿಸಿದರು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 4** | **ಕೃಷಿ ಸಂಶೋಧನಾ ಕೇಂದ್ರ ಗಂಗಾವತಿಯಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಪ್ರಸ್ತಾವನೆ.** |

**ಠರಾವು:**

ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯಲ್ಲಿ ಕೃಷಿ ಮಹಾವಿದ್ಯಾಲಯವನ್ನು ತಕ್ಷಣವೇ ಪ್ರಾರಂಭಿಸಲು ಹಾಗೂ ಈ ಬಗ್ಗೆ ಒಂದು ಸಮಗ್ರ ಪ್ರಸ್ತಾವನೆಯನ್ನು ಸರಕಾರದ ಅನುಮೋದನೆ ಹಾಗೂ ಮಂಜೂರಾತಿಗಾಗಿ ಸಲ್ಲಿಸಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 5** | **ಬಳ್ಳಾರಿ ಜಿಲ್ಲೆ ಹಗರಿಯಲ್ಲಿರುವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಪ್ರಸ್ತಾವನೆ.** |

**ಠರಾವು:**

ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿರುವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯವನ್ನು ತಕ್ಷಣವೇ ಪ್ರಾರಂಭಿಸಲು ಹಾಗೂ ಈ ಬಗ್ಗೆ ಒಂದು ಸಮಗ್ರ ಪ್ರಸ್ತಾವನೆಯನ್ನು ಸರಕಾರದ ಅನುಮೋದನೆ ಹಾಗೂ ಮಂಜೂರಾತಿಗಾಗಿ ಸಲ್ಲಿಸಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 6** | **ಸಿ.ಎ.ಎಸ್.96 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು** |

**ಠರಾವು:**

ಸಿ.ಎ.ಎಸ್.96 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿಗಾಗಿ ಕೃಷಿ ವಿಶ್ವವಿದ್ಯಾಲಯ ಧಾರವಾಡವು ಅಂತಿಮಗೊಳಿಸಿದ ಅರ್ಹ ಅಭ್ಯರ್ಥಿಗಳ ಫಲಿತಾಂಶವನ್ನು ಹಾಗೂ ಅದರ ಪ್ರಕಾರ ಪದೋನ್ನತಿ ಆದೇಶಗಳನ್ನು ನೀಡಲು ಘನ ವೇದಿಕೆಯು ಅನುಮೋದಿಸಿತು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 7** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎರಡನೇಯ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು.** |

**ಠರಾವು:**

ಘಟಿಕೋತ್ಸವ ಭಾಷಣ ಮಾಡಲು ಶೈಕ್ಷಣಿಕ ಕ್ಷೇತ್ರದಲ್ಲಿ ವಿಶಿಷ್ಠ ಸಾಧನೆಗೈದ ಈ ಕೆಳಕಂಡ ಗಣ್ಯ ವ್ಯಕ್ತಿಗಳಲ್ಲೊಬ್ಬರಿಗೆ ಅತಿಥಿಯನ್ನಾಗಿ ನಿಗದಿಪಡಿಸಲು ಹಾಗೂ ಅನುಮೋದನೆಗಾಗಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ

ಎರಡನೇಯ ಘಟಿಕೋತ್ಸವ ಭಾಷಣವನ್ನು ಮಾಡಲು ಅನುಕ್ರಮವಾಗಿ ಪ್ರಸ್ತಾಪಿಸಿದವರಲ್ಲಿ ಒಬ್ಬರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು, ಮತ್ತು ಇದನ್ನು ಘನವೆತ್ತ ರಾಜ್ಯಪಾಲರು ಹಾಗೂ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕುಲಾಧಿಪತಿಗಳ ಒಪ್ಪಿಗೆಗಾಗಿ ಸಲ್ಲಿಸಲಾಗುವುದು. ಮುಂದುವರೆದು, ಈ ಘಟಿಕೋತ್ಸವ ಸಮಾರಂಭಕ್ಕೆ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಘನವೆತ್ತ ರಾಜ್ಯಪಾಲರು ಅಧ್ಯಕ್ಷತೆ ವಹಿಸುವರು ಮತ್ತು ಕೃವಿವಿ ರಾಯಚೂರಿನ ಮಾನ್ಯ ಸಹ–ಕುಲಾಧಿಪತಿಗಳು ಹಾಗೂ ರಾಜ್ಯದ ಕೃಷಿ ಸಚಿವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 8 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |
|---|---|

**ಠರಾವು:**

ಸುದೀರ್ಘ ಚರ್ಚೆಯ ನಂತರ, ಅನುಕ್ರಮ ಸಂಖ್ಯೆ 1 ರಿಂದ 10 (ಅನುಕ್ರಮ ಸಂಖ್ಯೆ 8 ರಲ್ಲಿ ಎರಡು ಕಡೆಗಳಲ್ಲಿಯ ಕಾಮಗಾರಿಗಳು) ರವರೆಗೆ ಪಟ್ಟಿ ಮಾಡಿದ ಕಾಮಗಾರಿಗಳನ್ನು ಕೈಗೊಳ್ಳಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಅನುಕ್ರಮ ಸಂಖ್ಯೆ 11 ರಲ್ಲಿ ನಮೂದಿಸಿರುವುದು ಸಿವಿಲ್ ಕಾಮಗಾರಿಗಳಲ್ಲದಿರುವುದರಿಂದ, ತೋಟಗಾರಿಕೆ ಸಾಮಾಗ್ರಿಗಳ ಖರೀದಿ ಇರುವುದರಿಂದ, ಅದನ್ನು ಕುಲಪತಿಗಳವರೇ ಅನುಮೋದಿಸಬಹುದೆಂದು ಸಲಹೆ ನೀಡಿದರು. ಮುಂದುವರೆದು, ಪ್ರಸ್ತಾವನೆಯ ಅನುಕ್ರಮ ಸಂಖ್ಯೆ 8 ರಲ್ಲಿ ಎರಡು ಕಡೆಗಳಲ್ಲಿ ಆಯ್ಕೆ ಮಾಡಿದ ಕಾಮಗಾರಿಗಳ ಪ್ರಶ್ನೆಗೆ, ಕರ್ನಾಟಕ ಸರಕಾರದ ಅನುದಾನ ನೀಡುವ ಸಂಸ್ಥೆಗೆ ಸಲ್ಲಿಸಿದ ಯೋಜನಾ ದಾಖಲೆಗಳ ಪ್ರಕಾರ ಸಮಾನ ಕ್ಷೇತ್ರ ಹೊಂದಿರುವ ಎರಡು ಕಡೆಗಳಲ್ಲಿ ಅಂದರೆ ಕೃಷ್ಣ ಮೇಲ್ದಂಡೆ ಯೋಜನೆ ಮತ್ತು ತುಂಗಭದ್ರಾ ಮೇಲ್ದಂಡೆ ಯೋಜನೆಗಳಲ್ಲಿ ಪ್ರತಿಯೊಂದಕ್ಕೆ ರೂ. 36.17 ಲಕ್ಷ ಗಳಂತೆ ಇರುತ್ತದೆಯೆಂದು ಸ್ಪಷ್ಟೀಕರಿಸಲಾಯಿತು. ಆದಾಗ್ಯೂ, ಯೋಜನೆಯ ವಿಜ್ಞಾನಿಗಳು ಕಾಲುವೆಗಳಿಗಾಗಿ ಸ್ಥಳಗಳನ್ನು ಆಯ್ಕೆ ಮಾಡುವಾಗ ಮಾನ್ಯ ಸದಸ್ಯರುಗಳನ್ನು ಸಂಪರ್ಕಿಸಲು ಸಲಹೆ ನೀಡಲಾಯಿತು.

(ಕ್ರಮ : ಸಂಶೋಧನಾ ನಿದೇಶಕರು /ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 9 | **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಘಟಿಕೋತ್ಸವದಲ್ಲಿ 'ರೈತ ವಿಜ್ಞಾನಿ' ಪ್ರಶಸ್ತಿ ನೀಡುವ ಕುರಿತು.** |
|---|---|

**ಠರಾವು:**

ಸುದೀರ್ಘ ಚರ್ಚೆಯ ನಂತರ, ರಾಯಚೂರು ಕೃಷಿ ವಿಶ್ವವಿದ್ಯಾಲಯದಡಿ ಬರುವ ಅರ್ಹ ರೈತನಿಗೆ 'ರೈತ–ವಿಜ್ಞಾನಿ' ಪ್ರಶಸ್ತಿಯನ್ನು ಘಟಿಕೋತ್ಸವದ ಸಂದರ್ಭದಲ್ಲಿ ನೀಡಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಸೂಕ್ತ ಅಭ್ಯರ್ಥಿಯ ಆಯ್ಕೆಗಾಗಿ ಮಾರ್ಗದರ್ಶನಗಳನ್ನು ಅನುಸರಿಸಲು ಹಾಗೂ ಅದರ ಸಲುವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಲು ಸಲಹೆ ನೀಡಿದರು.

| | | |
|---|---|---|
| 1. | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |

| | | |
|---|---|---|
| 3. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 4. | ಶ್ರೀ ಅಲ್ಲಮಪ್ರಭು ಪಾಟೀಲ್ | ಸದಸ್ಯರು |
| 5. | ಶ್ರೀ ಭೋಜನಗೌಡ | ಸದಸ್ಯರು |
| 6. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 7. | ಶಿಕ್ಷಣ ನಿರ್ದೇಶಕರು | ಸದಸ್ಯರು |
| 8. | ಸಂಶೋಧನಾ ನಿರ್ದೇಶಕರು | ಸದಸ್ಯರು |
| 9. | ವಿಸ್ತರಣಾ ನಿರ್ದೇಶಕರು | ಸದಸ್ಯ–ಕಾರ್ಯದರ್ಶಿ |

(ಕ್ರಮ : ವಿಸ್ತರಣಾ ನಿದೇಶಕರು)

| | |
|---|---|
| **ಅನುಕ್ರಮ ಸಂ: 10** | **ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಅಧ್ಯಾದೇಶ, 2009 ಹಾಗೂ 2010 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 10 ರ ಚರ್ಚೆ ಕುರಿತು.** |

**ಠರಾವು:**

ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಅಧ್ಯಾದೇಶ, 2009 ಹಾಗೂ 2010 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 10 ಕುರಿತು ಚರ್ಚಿಸುವ ಸಂದರ್ಭದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರು ಸ್ಪಷ್ಟೀಕರಿಸಿದರು.

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 1** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2010–11 ನೇ ಸಾಲಿನ ವಾರ್ಷಿಕ ವರದಿಯನ್ನು ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸುವ ಕುರಿತು.** |

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2010–11 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸಿ ಸರ್ವಾನುಮತದಿಂದ ಅನುಮೋದನೆ ನೀಡುತ್ತಾ, ಇನ್ನು ಮುಂದೆ ವಾರ್ಷಿಕ ವರದಿಯನ್ನು ಸಭೆಗಿಂತ ಒಂದು ತಿಂಗಳ ಮುಂಚೆ ತಲುಪಿಸಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು.

(ಕ್ರಮ : ಕುಲಸಚಿವರು)

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 2** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಲೆಕ್ಕಪತ್ರ ವ್ಯವಹಾರವನ್ನು ಏಕದಾಖಲೆ ಪದ್ಧತಿಯಿಂದ ಜೋಡಿ ದಾಖಲೆ ಪದ್ಧತಿಗೆ ಸ್ಥಾನಾಂತರಿಸುವ ಕುರಿತು.** |

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಲೆಕ್ಕಪತ್ರಗಳ ವ್ಯವಹಾರಗಳನ್ನು ಏಕದಾಖಲೆ ಪದ್ಧತಿ ಬದಲಾಗಿ ಜೋಡಿದಾಖಲೆಯ ಪದ್ಧತಿ ಅನುಸರಿಸಲು ಅಳವಡಿಸಿಕೊಳ್ಳಲು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ರಾಜ್ಯದ ಇತರೇ ಕೃಷಿ ವಿಶ್ವವಿದ್ಯಾಲಯಗಳವರು ಸೇರಿ ಕೆ2 ಕನ್ಸಲ್ಟಿಂಗ್, ಬೆಂಗಳೂರು ಅವರೊಂದಿಗೆ ದರ ನಿಗದಿ ಬಗ್ಗೆ ಒಮ್ಮತದ ವಿಚಾರ ಪಡೆಯಲು ಮಾನ್ಯ ಅಧ್ಯಕ್ಷರು ನೀಡಿದ ಸಲಹೆಗೆ ಸಹ ಘನ ವೇದಿಕೆಯು ಒಪ್ಪಿಗೆ ಸೂಚಿಸಿತು.

(ಕ್ರಮ : ಹಣಕಾಸು ನಿಯಂತ್ರಾಧಿಕಾರಿಗಳು)

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 3** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 'ವಿಸ್ತರಣಾ ಶಿಕ್ಷಣ ಘಟಕ'ಗಳಿಗೆ 'ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ'ಗಳೆಂದು ಮರುನಾಮಕರಣ ಮಾಡುವ ಕುರಿತು.** |

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ 'ವಿಸ್ತರಣಾ ಶಿಕ್ಷಣ ಘಟಕ' ಗಳಿಗೆ 'ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು' ಎಂದು ಮರುನಾಮಕರಣ ಮಾಡುವ ಪ್ರಸ್ತಾವನೆಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಸರ್ವಾನುಮತದಿಂದ ಅನುಮೋದನೆ ನೀಡಿದರು.

(ಕ್ರಮ : ಕುಲಸಚಿವರು)

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 4** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಡಿಯಲ್ಲಿ ಬರುವ ವಿವಿಧ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖಾಲಿಯಿರುವ ವಿಷಯ ತಜ್ಞರು ಹಾಗೂ ಶಿಕ್ಷಕೇತರ** (service personnel) **ಸಿಬ್ಬಂದಿಯವರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು.** |

**ಠರಾವು:**

ವಿವಿಧ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖಾಲಿಯಿರುವ ವಿಷಯ ತಜ್ಞರು ಮತ್ತು ಶಿಕ್ಷಕೇತರ (service personnel) ಸಿಬ್ಬಂದಿಯವರ ಹುದ್ದೆಗಳನ್ನು ವಿಶ್ವವಿದ್ಯಾಲಯದ ಕೆಲಸದ ಹಿತದೃಷ್ಟಿಯಿಂದ ಭರ್ತಿ ಮಾಡಿಕೊಳ್ಳಲು ಸೂಚಿಸಿತು.

(ಕ್ರಮ : ಕುಲಸಚಿವರು)

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ /– 4–2–2012

**(ಬಿ.ವಿ. ಪಾಟೀಲ)**
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಸಹಿ /– 4–2–2012

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.